RW-2

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)**
ಪಾಟೀ ಸವಾಲುಃ ಶ್ರೀ ಸಿಎಂಜೆ, 5ನೇ ಎದುರುದಾರರ ಪರ ವಕೀಲರಿಂದ

ಈ ಪ್ರಕರಣದ 5ನೇ ಎದುರುದಾರರು ನನ್ನ ತಮ್ಮ ಲಿಂಗರಾಜುರವರಿಂದ ಏಡಮಡು ಗ್ರಾಮದ ಸರ್ವೆ ನಂ.47/1ಬಿ1ರಲ್ಲಿನ ಒಟ್ಟು 07 ಗುಂಟೆ ಜಂಟಿ ಖಾತೆ ಜಮೀನಿನ ಪೈಕಿ ಪೂರ್ವ ಪಶ್ಚಿಮ 54 ಅಡಿ ಉತ್ತರ ದಕ್ಷಿಣ 25 ಅಡಿ ಜಾಗವನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಜಮೀನು ನನ್ನ ಹಾಗೂ ನನ್ನ ತಮ್ಮ ಲಿಂಗರಾಜುರವರ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ನಿಪಿ-32ರಂತೆ ನಾನು ಹಾಗೂ ನನ್ನ ತಮ್ಮ ಲಿಂಗರಾಜು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಮ್ಮ ಲಿಂಗರಾಜುರವರ ಭಾಗಕ್ಕೆ ಬಂದ ಜಮೀನನ್ನು 5ನೇ ಎದುರುದಾರರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 5ನೇ ಎದುರುದಾರರು ಕ್ರಯಕ್ಕೆ ಪಡೆದುಕೊಂಡ ನಂತರ ಕ್ರಯ ಪತ್ರದ ಆಧಾರದ ಮೇಲೆ ರೆವಿನ್ಯೂ ದಾಖಲೆಗಳು ಅವರ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. 5ನೇ ಎದುರುದಾರರು ಕಗ್ಗಲಹಳ್ಳಿ ಗ್ರಾಮ ಪಂಚಾಯ್ತಿ ಕಛೇರಿಗೆ ಕಂದಾಯವನ್ನು ಪಾವತಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಅರ್ಜಿದಾರರ ಕಛೇರಿಯವರು ರಸ್ತೆ ಅಗಲೀಕರಣಕ್ಕೋಸ್ಕರ 5ನೇ ಎದುರುದಾರರಿಗೆ ಸೇರಿದ ಜಾಗವನ್ನು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರು ಹೊರಡಿಸಿರುವ ಭೂಪರಿಹಾರದ ಹಣಕ್ಕೆ 5ನೇ ಎದುರುದಾರರು ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರು ಹೊರಡಿಸಿರುವ ಭೂಪರಿಹಾರದ ಹಣದಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 5ನೇ ಎದುರುದಾರರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ತಕರಾರು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್ ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.